# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.331/2016/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:12.5.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:-** ನೆಲಮಂಗಲ ತಾಲ್ಲೂಕು, ವಿಶ್ವೇಶ್ವರಪುರ ಗ್ರಾಮದ ದೂರುದಾರರ ಜಮೀನು ಸರ್ವೆ ನಂ.18/2ರಲ್ಲಿ ಎದುರುದಾರರು ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳದೆ, ಪರಿಹಾರ ಧನ ನೀಡದೆ, ರಸ್ತೆ ನಿರ್ಮಿಸಿರುವುದರಿಂದ ದೂರುದಾರರ ರಸ್ತೆಗೆ ಹೋದ ಜಮೀನಿಗೆ ಸೂಕ್ತ ಪರಿಹಾರ ನೀಡಲು ಸೂಕ್ತ ಕ್ರಮಕೈಗೊಳ್ಳಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವ ಬಗ್ಗೆ.

*******

ಶ್ರೀ ಶಿವಕುಮಾರ್, ವಿಶ್ವೇಶ್ವರಪುರ, ನೆಲಮಂಗಲ ತಾಲ್ಲೂಕು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ಬಸವರಾಜಣ್ಣ, ಸಹಾಯಕ ಕಾರ್ಯಪಾಲಕ ಅಭಿಯಂತರು, ಜಿಲ್ಲಾ ಪಂಚಾಯತ್ ಉಪವಿಭಾಗ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ನೆಲಮಂಗಲ ತಾಲ್ಲೂಕು, ವಿಶ್ವೇಶ್ವರ ಪುರ ಗ್ರಾಮದ ಸರ್ವೆ ನಂ.18/2 ಕ್ಷೇತ್ರ 7 ಗುಂಟೆ ಜಮೀನು ದೂರುದಾರರ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಈ ಜಮೀನಿನಲ್ಲಿ ಎದುರುದಾರರು ರಸ್ತೆ ಮಾಡುತ್ತಿದ್ದು, ಆದರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳದೆ, ಪರಿಹಾರ ಧನ ನೀಡದೆ, ಕಾಮಗಾರಿ ಮಾಡಿರುತ್ತಾರೆ. ಈ ಜಮೀನಿನ ಪಕ್ಕದಲ್ಲಿ ರೈಲ್ವೆ ಟ್ರಾಕ್ ಸಹ ಹಾದುಹೋಗಿರುತ್ತದೆ. ರಸ್ತೆ ಮಾಡುವ ಸಮಯದಲ್ಲಿ ಪರಿಹಾರ ಧನ ನೀಡದೆ ರಸ್ತೆ ಮಾಡಬಾರದೆಂದು ತಡೆಯೊಡ್ಡಿದರೂ ಸಹಾ ರಾತ್ರೋರಾತ್ರಿ 40 ಅಡಿ ಅಗಲದ ರಸ್ತೆ ಮಾಡಿರುತ್ತಾರೆ. ಆದ್ದರಿಂದ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಪ್ರಸ್ತಾಪಿತ ರಸ್ತೆಯು ರಾಷ್ಟ್ರೀಯ ಹೆದ್ದಾರಿ 4ರಿಂದ ಓಬನಾಯಕನಹಳ್ಳಿ ಮಾರ್ಗ ಎಲಚೆಗೆರೆ ಗ್ರಾಮಕ್ಕೆ ಸಂಪರ್ಕ ಕಲ್ಪಿಸುತ್ತದೆ. ಈ ರಸ್ತೆಯು ಹಿಂದಿನಿಂದಲೂ ಬಳಕೆಯಲ್ಲಿದ್ದು, ಅದು

ದುಸ್ಥಿತಿಯಲ್ಲಿದ್ದ ಕಾರಣ ಸಾರ್ವಜನಿಕರ ಹಾಗೂ ಜನಪ್ರತಿನಿಧಿಗಳ ಒತ್ತಾಯದ ಮೇರೆಗೆ ಮಾನ್ಯ ಶಾಸಕರ ಶಿಫಾರಸ್ಸಿನ ಮೇರೆಗೆ ನಬಾರ್ಡ್ ಆರ್.ಐ.ಡಿ.ಎಫ್.20 ಶೀರ್ಷಿಕೆಯಡಿ 50 ಲಕ್ಷ ರೂ.ಗಳಿಗೆ ದಿ.14.7.2015ರಂದು ಟೆಂಡರ್ ನೀಡಲಾಗಿದೆ. ಕಾರ್ಯಾದೇಶ ನೀಡಲಾಗಿದ್ದು ಡಾಂಬರೀಕರಣ ಕಾಮಗಾರಿ ಪೂರ್ಣಗೊಂಡಿರುತ್ತದೆ. ಫಾರ್ಮೇಷನ್ ಹಂತದಲ್ಲಿದ್ದಾಗ ದೂರುದಾರರು ರಸ್ತೆ ನಿರ್ಮಾಣ ಮಾಡಬಾರದೆಂದು ತಕರಾರು ಅರ್ಜಿ ನೀಡಿದ್ದರಿಂದ ಸಮಸ್ಯೆ ಇತ್ಯರ್ಥವಾಗುವವರೆಗೆ ಕಾಮಗಾರಿ ಮಾಡಬಾರದೆಂದು ಗುತ್ತಿಗೆದಾರರಿಗೆ ಸೂಚಿಸಿ ಸ್ಥಗಿತಗೊಳಿಸಲಾಗಿತ್ತು. ಆದರೆ ಸಾರ್ವಜನಿಕರು ಹಾಗೂ ಜನಪ್ರತಿನಿಧಿಗಳು ಯಾವುದೇ ನ್ಯಾಯಾಲಯದ ತಡೆಯಾಜ್ಞೆ ಇರದೆ ಏಕೆ ಕೆಲಸ ನಿಲ್ಲಿಸಿರುತ್ತೀರೆಂದು ಸ್ಥಳದಲ್ಲಿ ಮೊಕ್ಕಾಂ ಮಾಡಿ ಒತ್ತಾಯಪೂರ್ವಕವಾಗಿ ಗುತ್ತಿಗೆದಾರರಿಂದ ಕೆಲಸ ಮಾಡಿಸಿರುತ್ತಾರೆ. ರಸ್ತೆ ನಿರ್ಮಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಲಾಗುತ್ತದೆಯೇ ವಿನಃ ಬೇರೆ ಉದ್ದೇಶವಿರುವುದಿಲ್ಲ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನು ಪುನರುಚ್ಚರಿಸಿದ್ದಾರೆ.

5. ದೂರುದಾರರು ಹಾಜರುಪಡಿಸಿದ ದೂರು, ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, 18/2 ಕ್ಷೇತ್ರ 6 ಗುಂಟೆ ಜಮೀನು ಹನುಮಕ್ಕ, ಬೀರಮ್ಮ, ಚಿಕ್ಕರಂಗಯ್ಯ, ಇವರ ಹೆಸರಿನಲ್ಲಿರುತ್ತದೆ. ಚಿಕ್ಕರಂಗಯ್ಯ ಅವರು ದೂರುದಾರರ ತಂದೆಯಾಗಿರುತ್ತಾರೆ. ದೂರಿನ ಮೇರೆಗೆ ಸದರಿ ಜಮೀನನ್ನು ಅಳತೆ ಮಾಡಿ ನಕ್ಷೆಯೊಂದಿಗೆ ವರದಿ ಸಲಿಸಲು ಡಿಡಿಎಲ್ಆರ್, ದೊಡ್ಡಬಳ್ಳಾಪುರ ಉಪವಿಭಾಗ, ಇವರಿಗೆ ಆದೇಶಿಸಲಾಗಿತ್ತು. ಅವರು ತಮ್ಮ ವರದಿಯೊಂದಿಗೆ ನಕ್ಷೆ ಸಲ್ಲಿಸಿದ್ದು, ಅದರಲ್ಲಿ ಸರ್ವೆ ನಂ.18/2 ಒಟ್ಟು ಕ್ಷೇತ್ರ ಖರಾಬು ಸೇರಿ 7 ಗುಂಟೆ ಜಮೀನು ತ್ರಿಕೋನಾಕಾರದಲ್ಲಿ ಇರುತ್ತದೆ. ಇದರ ಒಂದು ಪಕ್ಕ ರೈಲ್ವೆ ಟ್ರಾಕ್, ಇನ್ನೊಂದು ಪಕ್ಕದಲ್ಲಿ ಕಾಲುಹಾದಿ ಇರುವುದು ನಕ್ಷೆಯಿಂದ ತಿಳಿದುಬರುತ್ತದೆ. ಇಲ್ಲಿ 8 ಅಡಿ ಅಗಲದ ಕಾಲು ಹಾದಿ ಇರುವುದನ್ನು ದೂರುದಾರರು ಒಪ್ಪಿಕೊಳ್ಳುತ್ತಾರೆ.

6. ಆದರೆ ಎದುರುದಾರರು ಸಾರ್ವಜನಿಕ ರಸ್ತೆಗೆ 40 ಅಡಿ ಅಗಲದ ರಸ್ತೆ ನಿರ್ಮಿಸಲು ದೂರುದಾರರ ಜಮೀನನ್ನು ಅತಿಕ್ರಮಿಸಿಕೊಂಡು ರಸ್ತೆ ನಿರ್ಮಿಸಿದ್ದಾರೆಂದು ಕಂಡುಬರುತ್ತದೆ. ಈ ಜಮೀನನ್ನು ಸ್ವಾಧೀನಪಡಿಸಿಕೊಂಡಿಲ್ಲವೆನ್ನುವುದನ್ನು ಎದುರುದಾರರು ಒಪ್ಪಿಕೊಳ್ಳುತ್ತಾರೆ. ಆದರೆ ಹಿಂದೆ ಇದ್ದ ರಸ್ತೆಯನ್ನೇ ಸರಿಯಾಗಿ ಅಭಿವೃದ್ಧಿಪಡಿಸಲಾಗಿದೆಯೆಂದು ತಿಳಿಸಿದ್ದು, ಆದರೆ ಕಾಲುಹಾದಿ ಇರುವಂತಹ ರಸ್ತೆಯನ್ನು ಅಗಲೀಕರಣ ಮಾಡಿದಾಗ ಸಂಬಂಧಿತ ಭೂಮಾಲೀಕರಿಗೆ ಪರಿಹಾರ ಧನ ನೀಡಬೇಕಾಗುತ್ತದೆ. ಆದರೆ

2

ಎದುರುದಾರರು ಭೂಸ್ವಾಧೀನ ಪ್ರಕ್ರಿಯೆ ಅನುಸರಿಸದೆ ರಸ್ತೆ ಕಾಮಗಾರಿ ನಿರ್ವಹಿಸಿದ್ದು ದಾಖಲೆಗಳಿಂದ ಕಂಡುಬರುತ್ತದೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸಮಸ್ಯೆ ಇತ್ಯರ್ಥವಾಗುವವರೆಗೆ ಕಾಮಗಾರಿ ಕೈಗೊಳ್ಳಬಾರದೆಂದು ಗುತ್ತಿಗೆದಾರರಿಗೆ ಸೂಚಿಸಿದ್ದರೂ ಸಹಾ ಸಾರ್ವಜನಿಕರ ಒತ್ತಾಯದ ಮೇರೆಗೆ ಕಾಮಗಾರಿ ಕೈಗೊಳ್ಳಲಾಗಿದೆಯೆಂದು ತಿಳಿಸಿರುವುದರಿಂದ ಎದುರುದಾರರು ತಮ್ಮ ಕರ್ತವ್ಯ ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆಂದು ಕಂಡುಬರುತ್ತದೆ. ಆದ್ದರಿಂದ ಎದುರುದಾರರು ಕರ್ತವ್ಯಲೋಪ ಎಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

7. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ದೂರುದಾರರ ಜಮೀನು ಸರ್ವೆ ನಂ.18/2ರಲ್ಲಿ ಎದುರುದಾರರು ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳದೆ, ಪರಿಹಾರ ಧನ ನೀಡದೆ, ರಸ್ತೆ ನಿರ್ಮಿಸಿರುವುದರಿಂದ ದೂರುದಾರರ ರಸ್ತೆಗೆ ಹೋದ ಜಮೀನಿಗೆ ಸೂಕ್ತ ಪರಿಹಾರ ನೀಡಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 12/5/17

[ ನ್ಯಾಯಮೂರ್ತಿ ಸುಭಾಷ್ ಬಿ ಆಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.

12/5